ಮೂಲ ದಾವಾ ಸಂಖ್ಯೆ. 4/2023 ಡಿ ಡಬ್ಲ್ಯೂ 5

(ದಿನಾಂಕ 29-10-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣಿಕರಿಸಲಾಯಿತು.)

ಪಾಟೀ ಸವಾಲುಃ ವಾದಿ ಪರ ಶ್ರೀ ಹೆಚ್ ಹೆಚ್ ವಕೀಲರಿಂದಃ-

ನಾನು ಈಗ ಈಚಲ ಬೊಮ್ಮನಹಳ್ಳಿ ಗ್ರಾಮದಲ್ಲಿ ವಾಸವಾಗಿದ್ದೇನೆ. ನನಗೆ ಈಗ 60 ವರ್ಷ ವಯಸ್ಸಾಗಿದೆ. ನನ್ನ ತಂದೆ ತನ್ನ ವಿವಾಹ ಪೂರ್ವದಲ್ಲಿಯೇ ಉಲುವತ್ತಿಗ್ರಾಮವನ್ನು ಬಿಟ್ಟು ಹೋಗಿ ಈಚಲು ಬೊಮ್ಮನಹಳ್ಳಿ ಗ್ರಾಮದಲ್ಲಿ ವಾಸವಾಗಿದ್ದರು ಎಂದರೆ ಸರಿ. ನಾನು ಈಚಲ ಬೊಮ್ಮನಹಳ್ಳಿ ಗ್ರಾಮದಲ್ಲಿ ಜನಿಸಿರುತ್ತೇನೆ. ಅಲ್ಲಿಂದ ಇಲ್ಲಿಯವರೆಗು ನಾನು ಉಲುವತ್ತಿ ಗ್ರಾಮಕ್ಕೆ ಬಂದಿರುವುದಿಲ್ಲ. ನನ್ನ ಸಾಕ್ಷ್ಯ ಪ್ರಮಾಣಪತ್ರ ಬರೆದಿರುವ ವಿಚಾರ ನನಗೆ ಗೊತ್ತು. ಆಶ್ರಯ ಯೋಜನೆಯ ಜಾಗದ ವಿಚಾರ ನನ್ನ ಸಾಕ್ಷ್ಯ ಪ್ರಮಾಣ ಪತ್ರದಲ್ಲಿ ಬರೆದಿದ್ದು ಇದೆ. ಸದರಿ ಜಾಗದ ನಂಬರ್ ನನಗೆ ಗೊತ್ತಿಲ್ಲ. ಸದರಿ ಆಸ್ತಿಯ ಚೆಕ್ ಬಂದಿ ನನಗೆ ಗೊತ್ತಿರುವುದಿಲ್ಲ. ಯಾವ ವಿಚಾರಕ್ಕಾಗಿ ದಾವೆ ದಾಖಲಿಸಿದ್ದಾರೆ ಎನ್ನುವುದು ನನಗೆ ಗೊತ್ತಿಲ್ಲ. ಸಾಕ್ಷಿಯು ಮುಂದುವರೆದು ನನ್ನ ತಂದೆ ಕಸ್ತೂರಮ್ಮ ಇವರಿಗೆ ಕೊಟ್ಟಿದ್ದಾರೆ ಎನ್ನುತ್ತಾರೆ. ಸದರಿ ಜಾಗ ನನ್ನ ಅಜ್ಜ ಬಾಗಳಜ್ಜ ಮತ್ತು ಹುಲಿಗೆಮ್ಮ ಇವರ ಹೆಸರಿನಲ್ಲಿತ್ತು. ಆ ರೀತಿ ಜಾಗ ಮಾರಾಟ ಮಾಡಿದ್ದಾರೆ ಅಂತಾ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಖರೀದಿ ಪತ್ರವನ್ನು ನೋಡಿಲ್ಲ. ಈ ದಾವಾ ಆಸ್ತಿ ಎಷ್ಟು ಇದೆ ನನಗೆ ಗೊತ್ತಿಲ್ಲ. ಪ್ರತಿವಾದಿಯರು ನನಗೆ ಸಂಬಂದಿಕರು ಅಲ್ಲ . ಸಾಕ್ಷಿ ನುಡಿಯಲು ನಿಮ್ಮನ್ನು ಯಾರು ಕರೆತಂದಿದ್ದಾರೆ ಎಂದರೆ ಸಾಕ್ಷಿಯು ನಾನೇ ಬಂದಿದ್ದೇನೆ ಅನ್ನುತ್ತಾರೆ. ನನ್ನ ತಂದೆಗೆ 4 ಜನ ಸಹೋದರರು. ಅವರೆಂದರೆ ಶೇಕರಪ್ಪ, ಚಂದ್ರಪ್ಪ, ರಾಮಜ್ಜ ಮತ್ತು ಪಕ್ಕೀರಪ್ಪ . ಪ್ರತಿವಾದಿಯರಿಗೆ ಸಹಾಯಮಾಡಲು ನನಗೆ ಯಾವುದೇ ವಿಚಾರ ಗೊತ್ತಿಲ್ಲದಿದ್ದರೂ ಸಹ ಸುಳ್ಳು ಸಾಕ್ಯೆ ಪ್ರಮಾಣ ಪತ್ರವನ್ನು ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಲಾಯಿತು.)

ಓ. ಹೇ. ಕೇ. ಸರಿ ಇದೆ,

ಸಿವಿಲ್ ಜಡ್ಜ ಮತ್ತು ಜೆ ಎಂ ಎಫ್ ಸಿ.,
ಹಗರಿಬೊಮ್ಮನಹಳ್ಳಿ